ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **05**
ಸಿ.ಡಬ್ಲ್ಯೂಃ **04**

| | |
|---|---|
| ಸಾಕ್ಷಿಯ ಹೆಸರು | ಹೇಮಂತ್ ಕುಮಾರ್ |
| ತಂದೆ/ಗಂಡನ ಹೆಸರು | ಜಯರಾಮ ಉರುಫ್ ಜಯರಾಮೇಗೌಡ |
| ವಯಸ್ಸು | 32 ವರ್ಷ |
| ಉದ್ಯೋಗ | ಕೆ.ಇ.ಬಿ ಕಂಟ್ರಾಕ್ಟರ್ |
| ವಿಳಾಸ | ಪಾಂಡವಪುರ ಟೌನ್ |

ಸಾಕ್ಷಿಗೆ ದಿನಾಂಕ **10.07.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ಸ್ನೇಹಿತ. ಆರೋಪಿ ನೋಡಿರುತ್ತೇನೆ ಅಪಘಾತಪಡಿಸಿದ ಕೆ.ಎಸ್.ಆರ್.ಟಿ.ಸಿ ಬಸ್ ನ ಚಾಲಕ.

ದಿ.**02.04.2021** ರಂದು ನಾನು ಮೈಸೂರಿನಿಂದ ಪಾಂಡವಪುರಕ್ಕೆ ಹೋಗುತ್ತಿರುವಾಗ ಶ್ರೀರಂಗಪಟ್ಟಣ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹಿಂಭಾಗ ವಿನಾಯ ವೈನ್ ಸ್ಟೋರ್ ನ ಎದುರು ಕೆಎ-**11**-ಎಫ್-**0414** ಕೆ.ಎಸ್.ಆರ್.ಟಿ.ಸಿ ವಾಹನವು ನಾವು ಬಲಭಾಗದಲ್ಲಿ ಹುಂಡೈ ಹೈ-**20** ಕಾರ್ ನ ಸಂಖ್ಯೆ ಕೆಎ-**11**-ಎಂ-**8876** ವಾಹನದಲ್ಲಿ ಚಾ ಸಾ **1** ರವರು ಚಾಲನೆ ಮಾಡುತ್ತಿದ್ದು ನಾನು ಮುಂದಿನ ಎಡಭಾಗದ ಸೀಟ್ ನಲ್ಲಿ ಕುಳಿತು ಪ್ರಯಾಣಿಸುತ್ತಿದ್ದೆ. ನಾವುಗಳು ಕುಳಿತಿದ್ದ ವಾಹನ ಬಲಭಾಗದಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದು ಮೈಸೂರಿನಿಂದ ಬಂದ ಕೆ.ಎಸ್.ಆರ್.ಟಿ.ಸಿ ಬಸ್ ವಿನಾಯ ವೈನ್ ಸ್ಟೋರ್ ನ ಮುಂಭಾಗದಲ್ಲಿ ಚಾಲಕ ಬಸ್ಸನ್ನು ತನ್ನ ಬಲಭಾಗಕ್ಕೆ ಎಳೆದುಕೊಂಡಿದ್ದು ಆಗ ನಮ್ಮ ಕಾರ್ ನ ಎಡಭಾಗಕ್ಕೆ ತಗುಲಿ ಜಕಂಗಳಾಗಿರುತ್ತದೆ. ನನಗೆ ಮೂಗು, ಕಣ್ಣು, ತೋಳಿಗೆ ಪೆಟ್ಟಾಗಿರುತ್ತದೆ. ಬಸ್ ಡಿಕ್ಕಿ ಮಾಡಿದ ಪರಿಣಾಮ ನಮ್ಮ ಕಾರು ಬಲಭಾಗದ ಡಿವೈಡರ್ ಗೆ ಹೋಗಿ ತಾಗಿರುತ್ತದೆ. ನಂತರ ನಾನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

## ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ

ಬೆ-ಮೈಸೂರು ಹೆದ್ದಾರಿಯು ಯಾವಾಗಲೂ ವಾಹನದಟ್ಟನೆಯಿಂದ ಕೂಡಿರುತ್ತದೆ ಎಂದರೆ ಸರಿ. ಅಕ್ಕ-ಪಕ್ಕದ ಎರಡೂ ರಸ್ತೆಗಳಲ್ಲಿ ಅಂಗಡಿಗಳು ಇರುವುದರಿಂದ ಜನರು ಆಕಡೆ ಮತ್ತು ಈಕಡೆ ರಸ್ತೆಗೆ ದಾಟುತ್ತಿರುತ್ತಾರೆ ಎಂದರೆ ಸರಿ. ವೈನ್ ಸ್ಟೋರ್ ನ ಸ್ವಲ್ಪ ಮುಂಭಾಗದಲ್ಲಿ ಒಂದು ವೇಗ ನಿರೋದಕ ಹಂಪ್ ಇದೆ ಎಂದರೆ ಸರಿ. ನಾವು ಪ್ರಯಾಣ ಮಾಡುತ್ತಿದ್ದ ಕಾರ್ ನ ಮುಂಭಾಗದಲ್ಲಿ ಎಷ್ಟು ವಾಹನಗಳು ಇತ್ತು ಎಂದು ತಿಳಿದಿರುವುದಿಲ್ಲ, ಆದರೆ ವಾಹನಗಳು ಇದ್ದವು. ಯಾವುದೇ ಕೆ.ಎಸ್.ಆರ್.ಟಿ.ಸಿ ವಾಹನ ಮೈಸೂರಿನಿಂದ ಬಂದತೆ ಎಡಭಾಗದ ಮೂಲಕ ಬಸ್ ನಿಲ್ದಾಣದ ಒಳಗೆ ಹೋಗುತ್ತದೆ ಎಂದರೆ ಸರಿ, ಅವರು ಬಲಭಾಗಕ್ಕೆ ಪ್ರಮೇಯ ಬರುವುದಿಲ್ಲ ಎಂದರೆ ಸರಿ. ಘಟನೆ ಯಾವ ರೀತಿ ನಡೆದಿರುತ್ತದೆ ಎಂದು ಸಂಪೂರ್ಣ ವಿವರವನ್ನು ವೈದ್ಯರ ಬಳಿ ನಾನು ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ಬಸ್ಸು ವೇಗವಾಗಿ ಹೋಗುತ್ತಿತ್ತು ಎಂದು ಹೇಳಿರುತ್ತೇನೆ, ಎಷ್ಟು ವೇಗವಾಗಿ ಹೋಗುತ್ತಿತ್ತು ಎಂದು ಹೇಳಿರುವುದಿಲ್ಲ. ನಿಪಿ 7 ರಲ್ಲಿ ಕಾರ್ ನ ಬಲಭಾಗಕ್ಕೆ ಯಾವುದೇ ಜಕಂ ಗಳು ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಆರೋಪ ಪಟ್ಟಿಯಲ್ಲಿ ಸಲ್ಲಿಸಿರುವ ಒಂದು ಕಾರ್ ನ ಛಾಯಚಿತ್ರವನ್ನು ತೋರಿಸಲಾಗಿ ಸಾಕ್ಷಿ ಸದರಿ ಛಾಯಚಿತ್ರದಂತೆ ಕೆಎ-11-ಎಂ-8876 ಕ್ಕೆ ಬಲಭಾಗದಲ್ಲಿ ಯಾವುದೇ ಜಕಂ ಕಂಡುಬಂದಿರುವುದಿಲ್ಲ ಎಂದು ಒಪ್ಪಿಕೊಂಡ ಮೇರೆಗೆ ಸದರಿಯನ್ನು ನಿಡಿ 1 ಎಂದು ಗುರುತಿಸಲಾಯಿತು. ಕಾರು ಡಿವೈಡರ್ ಗೆ ಹೊಡೆದಂತ ಸಂದರ್ಭದಲ್ಲಿ ಜಕಂಗಳಾಗುತ್ತವೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಡಿವೈಡರ್ ನ ಎತ್ತರದ ಮೇಲೆ ಜಕಂಗಳು ಆಗುವಿಕೆ ಅವಲಂಬಿತವಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಚಾ ಸಾ 1 ಮತ್ತು ನನಗೆ ಯಾವುದೇ ಅಪಘಾತ ವಿಮಾ ಪರಿಹಾರ ಬಂದಿರುವುದಿಲ್ಲ. ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನ ಅಜಾಗರೂಕತೆಯಿಂದ ಅಪಘಾತವಾಗಿರುವುದಿಲ್ಲ, ಚಾ ಸಾ 1 ರವರ ಅಜಾಗರೂಕತೆ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಚಾ ಸಾ 1 ರವರ ದೂರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡದೆ ಇದ್ದರೂ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ಮತ್ತು ನಾನು ಅಪಘಾತ ವಿಮಾ ಪರಿಹಾರ ಪಡೆಯಲು ಕೋರಿ ಯಾವುದೇ ನ್ಯಾ.ಯ ಅಥವಾ ವಿಮಾ ಕಂಪನಿಗೆ ಅರ್ಜಿ ಸಲ್ಲಿಸಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲಃ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ